ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ (ಕಂದಾಯ ರಾಜ್ಯ ಸಚಿವರು) : ಮಾನ್ಯ ಹಸನ್‌ಸಾಬ್ ನಬಿಸಾಬ್ ಧೋತಿಹಾಳ್ ಮತ್ತು ಕರಡಿ ಸಂಗಣ್ಣನವರು ಏನು ವಿಷಯವನ್ನು ಎತ್ತಿದ್ದಾರೆ ಆ ಸಂಬಂಧವಾಗಿ ಇವತ್ತು ಕುಷ್ಟಗಿ ತಾಲ್ಲೂಕಿನ ಎಂ. ರಾಮಾಪುರ ಗ್ರಾಮದಲ್ಲಿ ಬೆಳಗಿನ 4.30 ಗಂಟೆಗೆ ಸುಮಾರು 8 ಜನರ ಕುಟುಂಬದಲ್ಲಿ ಶ್ರೀಮತಿ ವೀರಬಸಮ್ಮ, 35 ವರ್ಷ ವಯಸ್ಸಿನ ಮಹಿಳೆ 20 ವರ್ಷಗಳಿಂದ ಅಸ್ತಮಾ ರೋಗದಿಂದ ಬಳಲುತ್ತಿದ್ದು, ಸಾಕಷ್ಟು ದಿನಗಳಿಂದ ಚಿಕಿತ್ಸೆ ಪಡೆಯುತ್ತಿದ್ದರೂ ಗುಣಮುಖರಾಗದೆ ಜೀವನದಲ್ಲಿ ಜಿಗುಪ್ಸೆ ಆಗಿ ಇಂದು ಬೆಳಿಗ್ಗೆ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡು ಮರಣ ಹೊಂದಿದರು. ಆ ಘಟನೆಯಿಂದಾಗಿ ಅವರು ಮೂವರು ತಮ್ಮಂದಿರು, ಮೂವರು ತಂಗಿಯರು ಸಹ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವುದು ನಿಜ. ಈಗಾಗಲೇ ಆ ಕುಟುಂಬದಲ್ಲಿ ಒಬ್ಬ ಮಗ, ತಂದೆ, ತಾಯಿ ಮಾತ್ರ ಉಳಿದಿದ್ದಾರೆ. ಇವರು ಚಿಕ್ಕ ವ್ಯಾಪಾರಿಗಳು ಅಂದರೆ ಸಣ್ಣ ಕಿರಾಣಿ ವ್ಯಾಪಾರವನ್ನು ಮಾಡುತ್ತಿದ್ದಾರೆ. ಇವರಿಗೆ ನಾಲ್ಕೂವರೆ ಎಕರೆ ಜಮೀನು ಇದೆಯೆಂದು ನಮಗೆ ಮಾಹಿತಿ ಬಂದಿದೆ. ಜಿಲ್ಲಾಧಿಕಾರಿಗಳು, ಜಿಲ್ಲಾ ಪೊಲೀಸ್ ಅಧಿಕಾರಿಗಳು ಹೋಗಿ ಸ್ಥಳಕ್ಕೆ ಬೇಟಿ ನೀಡಿದ್ದಾರೆ. ಸರ್ಕಾರ ಅವರಿಗೆ ಏನಾದರೂ ಸಹಾಯ ಮಾಡಲಿಕ್ಕೆ ಪ್ರಯತ್ನಿಸುತ್ತಿದೆ ಎಂದು ನಾನು ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಈ ಸದನದ ಮೂಲಕ ನಾನು ಜನರಲ್ಲಿ ಮನವಿಯನ್ನು ಮಾಡಿಕೊಳ್ಳುತ್ತೇನೆ. ಇನ್ನು ಮುಂದೆ ಎಲ್ಲಿಯೂ ಇಂತಹ ಅಹಿತಕರ ಘಟನೆಗಳೂ ನಡೆಯಬಾರದೆಂಬುದು ನಮ್ಮ ಉದ್ದೇಶವಿದೆ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ನಾನೂ ಸಹ ಬರೆದು ಕಳುಹಿಸಿದ್ದೇನೆ. ಮಾನ್ಯ ಸಚಿವರು ಸತ್ಯಾಂಶವನ್ನು ಮುಚ್ಚಿ ಹಾಕಲಿಕ್ಕೆ ಪ್ರಯತ್ನಿಸುತ್ತಿದ್ದಾರೆ. ನಿಜವಾಗಿಯೂ ನೋವು ಅನಿಸುತ್ತಿದೆ. ಅವರು ಅನ್ನ ಇಲ್ಲದೆ ಉಪವಾಸವಿದ್ದು ಸತ್ತಿದ್ದಾರೆ. ಅದನ್ನು ಮುಚ್ಚಿ ಹಾಕುವ ಪ್ರಯತ್ನ ಮಾಡುತ್ತಿದ್ದಾರೆ. ಏನೋ ಜಡ್ ಹತ್ತಿ ಆ ಹೆಂಗಸು ಸತ್ತಿರಬಹುದು. ಇಡೀ ಕುಟುಂಬ ಸತ್ತಿದೆಯೆಂದು ಪ್ರಚಾರ ಮಾಡುತ್ತಿದ್ದಾರೆ. ಅಲ್ಲಿನ ಜನರಿಗೆ ಕೂಳು ಇಲ್ಲ. ಉಪವಾಸದಿಂದ ಸತ್ತಿದ್ದಾರೆ. ಬದುಕಲಾರದೆ ಸತ್ತಿದ್ದಾರೆ. ದಯವಿಟ್ಟು ಮುಚ್ಚಿ ಹಾಕುವಂತಹ ಪ್ರಯತ್ನ ಮಾಡಬೇಡಿ. ಇದು ವಿಚಾರಣೆಯಾಗಬೇಕು. ಇದು ನ್ಯಾಯಾಂಗ ತನಿಖೆ ಆಗಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ : ಯಾವುದೇ ಕಾರಣಕ್ಕೂ ಇದನ್ನು ಮುಚ್ಚಿ ಹಾಕುವ ಪ್ರಯತ್ನ ಮಾಡುತ್ತಿಲ್ಲ.

ಅಧ್ಯಕ್ಷರು : ಶೂನ್ಯ ವೇಳೆಯಲ್ಲಿ ಎತ್ತುವ ಪ್ರಸ್ತಾಪಗಳಿಗೆ ಚರ್ಚೆ ಮಾಡಲು ಅವಕಾಶವಿಲ್ಲ. ನೋ ಡಿಸ್ಕೌಷನ್.

ವಿಷಯ :(ಈ) ಹುಬ್ಬಳ್ಳಿಯಲ್ಲಿರುವ ಕೆರೆ ದಂಡೆಯ ಮೇಲಿದ್ದ 108 ಎಕರೆ ಜಮೀನನ್ನು ಖಾಸಗಿ ಹೋಟೆಲ್ ಮಾಲೀಕರು ಕೆ.ಐ.ಎ.ಡಿ.ಬಿ. ಮುಖಾಂತರ ಸ್ವಾಧೀನಪಡಿಸಿಕೊಂಡು ಅದನ್ನು ಗಾಲ್ಫ್ ಗ್ರೌಂಡ್ ಆಗಿ ಪರಿವರ್ತಿಸುತ್ತಿರುವ ಬಗ್ಗೆ

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಹುಬ್ಬಳ್ಳಿಯಲ್ಲಿ ಇರುವ ಉಣಕಲ್ ಕೆರೆ ಬಹಳ ಹಳೆಯದಾದ ಕೆರೆ, ಆದರೆ ಇತ್ತೀಚಿನ ವರ್ಷಗಳಲ್ಲಿ ಆ ಕೆರೆ ಬತ್ತಿ ಹೋಗುವಂತಹ ಪರಿಸ್ಥಿತಿಯಲ್ಲಿದೆ. ಒಂದು ಕಾಲದಲ್ಲಿ ಇಡೀ ಹುಬ್ಬಳ್ಳಿ ನಗರಕ್ಕೆ ಕುಡಿಯುವ ನೀರಿನ ವ್ಯವಸ್ಥೆಯನ್ನು

ಈ ಕೆರೆಯಿಂದ ಮಾಡಲಾಗುತ್ತಿತ್ತು. ಈಗ ಸುತ್ತಮುತ್ತ ಬಡಾವಣೆಗಳು ಬಂದಿವೆ. ಕ್ಯಾಚ್‌ಮೆಂಟ್ ಏರಿಯಾ ಎಲ್ಲಾ ಮಾಯ ಆಗುತ್ತಿದೆ. ಇವತ್ತು ನೀರು ಬರಲಾರದ ಸ್ಥಿತಿ ಈ ಉಣಕಲ್ ಕೆರೆಗೆ ಇದೆ. ಇದರ ಜೊತೆಗೆ ಅಲ್ಲಿ ಉಣಕಲ್ ಕೆರೆಯ ದಂಡೆಯ ಮೇಲಿದ್ದಂತಹ ಖಾಸಗಿ ಹೋಟೆಲ್ ಮಾಲೀಕರು 108 ಎಕರೆ ಜಮೀನನ್ನು ಕೆ.ಐ.ಎ.ಡಿ.ಬಿ ಮುಖಾಂತರ ಸ್ವಾಧೀನ ಪಡಿಸಿಕೊಂಡು ಅದನ್ನು ಗಾಲ್ಫ್ ಗ್ರೌಂಡ್ ಮಾಡುವ ಸಲುವಾಗಿ ಅಕ್ವಿಜಿಶನ್ ಪ್ರೊಸೀಡಿಂಗ್ಸ್ ಆಗುತ್ತಿದೆ. ಈ ರೀತಿ ಗಾಲ್ಫ್ ಗ್ರೌಂಡ್‌ಗೆ ಅಕ್ವಿಜಿಷನ್ ಮಾಡಿ ಅವರಿಗೆ ಕೊಟ್ಟರೆ ಬಹುಶಃ ಆ ಕ್ಯಾಚ್‌ಮೆಂಟ್‌ಏರಿಯಾ ಪೂರ್ತಿ ಮುಳುಗಿ ಹೋಗಿ ನಾಳೆ ಪೂರ್ಣವಾಗಿ ಈ ಉಣಕಲ್ ಕೆರೆ ಮುಚ್ಚಿ ಹೋಗುವ ಪರಿಸ್ಥಿತಿ ನಿರ್ಮಾಣವಾಗಿದೆ. ಅಲ್ಲಿ ಎನ್‌ಕ್ರೋಚ್‌ಮೆಂಟ್ ಆಗಿದೆ. ಎನ್ನುವಂತಹದ್ದು ಇದೆ. ಆ ಬಗ್ಗೆ ಒಂದು ಸರ್ವೆಗೆ ತಾವು ಆದೇಶ ಮಾಡಿದ್ದೀರಿ ಎಂದು ನನಗೆ ತಿಳಿದುಬಂದಿದೆ. ಆ ಸರ್ವೆ ಮಾಡಿದ್ದು ಏನಾಯಿತು? ಅದರ ಬಗ್ಗೆ ಎನ್‌ಕ್ರೋಚ್‌ಮೆಂಟ್ ಆಗಿರುವುದು ನಿಜವೇ ಹೇಗೆ? ಇದರ ಬಗ್ಗೆ ವಿವರಣೆ ಕೊಡಬೇಕು ಮತ್ತು ಈ ರೀತಿಯಾಗಿ ಆ ಉಣಕಲ್ ಕೆರೆಯ ಸಂರಕ್ಷಣೆ ಮಾಡುವಂತಹ ಸರ್ಕಾರ ಅದನ್ನು ಮುಚ್ಚಲಿಕ್ಕೆ ಅವಕಾಶ ಕೊಡದೆ ಕೆ.ಐ.ಎ.ಡಿ.ಬಿ ಯಿಂದ ನೀವು ಅಕ್ವಿಜಿಷನ್ ಮಾಡುತ್ತಿದ್ದರೆ ಆ ಪ್ರೊಸೀಡಿಂಗ್ಸ್ ಕೈಬಿಡಬೇಕು ಅಂತ ನಾನು ಒತ್ತಾಯಿಸುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು) : ಮಾನ್ಯ ಅಧ್ಯಕ್ಷರೆ 1997ನೇ ಇಸವಿಯಲ್ಲಿ ಮೂಲತಃ 1994ನೇ ಇಸವಿಯಲ್ಲಿ ಇದರ ಅಕ್ವಿಜಿಷನ್ ಶುರುವಾಗಿದೆ. 108 ಎಕರೆ ಜಮೀನಿನಲ್ಲಿ ಗಾಲ್ಫ್ ಎಂದರೆ, it is recognised as a tourism project. ಅದನ್ನು ಮಾಡಬೇಕೆಂದು ಅಕ್ವಿಜಿಷನ್ ಆಗಿ ಲ್ಯಾಂಡ್ ಅಕ್ವೈರ್ ಆಗಿಹೋಗಿದೆ. ಅದರಲ್ಲಿ 5 ಜನ ಹೈಕೋರ್ಟ್‌ಗೆ ಹೋಗಿದ್ದರು. ಹೈಕೋರ್ಟ್‌ನಲ್ಲಿ 5 ಜನರ ರಿಟ್ ಡಿಸ್‌ಮಿಸ್ ಆಗಿದೆ. 3 ಜನ ರಿಟ್ ಅಪೀಲ್ ಹೋಗಿದ್ದಾರೆ ಅದು ಪೆಂಡಿಂಗ್ ಇದೆ. ನನಗೆ ಬಂದ ಮಾಹಿತಿಯ ಪ್ರಕಾರ ಕಳೆದ 30-40 ವರ್ಷಗಳಲ್ಲಿ ಅಲ್ಲಿ ಯಾವ ಲ್ಯಾಂಡ್, ಟ್ಯಾಂಕ್ ಬೆಡ್ ಲ್ಯಾಂಡ್ ಎನ್‌ಕ್ರೋಚ್ ಆಗಿರುವುದು ಇರುವುದಿಲ್ಲ. ನನಗೆ ಬಂದಿರುವ ಮಾಹಿತಿಯ ಪ್ರಕಾರ ಅಲ್ಲಿ ಗಾಲ್ಫ್ ಕ್ಲಬ್‌ನಿಂದ ಕ್ಯಾಚ್‌ಮೆಂಟ್ ಏರಿಯಾ ಮೇಲೆ ಏನೂ ಪರಿಣಾಮವಾಗುವುದಿಲ್ಲ. ಆದರೂ ಸಹ ಮಾನ್ಯ ವಿರೋಧಪಕ್ಷದ ನಾಯಕರು ವಿಚಾರವನ್ನು ! ಥ್ಯಾಪಿಸಿರುವುದರಿಂದ ಪುನಃ ಈ ಬಗ್ಗೆ ವಿಚಾರಣೆ ಮಾಡಿ ಸೂಕ್ತ ಪ್ರಯತ್ನವನ್ನು ಮಾಡುತ್ತೇನೆ.

ಅಧ್ಯಕ್ಷರು : ಶೂನ್ಯ ವೇಳೆ ಮುಗಿಯಿತು. ಇದು 7ನೇ ಶೂನ್ಯವೇಳೆಯಾಗಿದೆ. ಇನ್ನೂ 25 ಶೂನ್ಯವೇಳೆಯಲ್ಲಿ ಚರ್ಚೆ ಮಾಡುವ ವಿಷಯಗಳಿವೆ. ಒಂದೇ ಸಾರಿ ಎಲ್ಲವನ್ನು ಶೂನ್ಯವೇಳೆಯಲ್ಲಿ ತೆಗೆದುಕೊಳ್ಳಲಿಕ್ಕೆ ಸಾಧ್ಯವಿಲ್ಲ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಇವತ್ತು ಶೂನ್ಯವೇಳೆ ಮುಗಿಯಿತು. ನಮಗೆ ಯಾವಾಗ ಅವಕಾಶ ಕೊಡುತ್ತೀರಿ ಎಂಬುದನ್ನು ತಿಳಿಸಿ.

ಅಧ್ಯಕ್ಷರು : ನಾಳೆ ನಿಮಗೆ ಆದ್ಯತೆ ನೀಡುತ್ತೇನೆ. ಬೇರೆಯದು ತೆಗೆದುಕೊಳ್ಳುವುದಿಲ್ಲ. ಕೃಷ್ಣಮೂರ್ತಿಯವರೇ ನಾನು ಎದ್ದ ಮೇಲೆ ತಾವು ಕೂಡಬೇಕು. ದಯವಿಟ್ಟು ಕುಳಿತುಕೊಳ್ಳಿ. ಇವತ್ತು ಶೂನ್ಯ ವೇಳೆ ಮುಗಿಯಿತು. ಒಂದೇ ದಿವಸ 20-30 ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡುವ ವಿಷಯಗಳನ್ನು ತೆಗೆದುಕೊಳ್ಳಲಿಕ್ಕೆ ಆಗುವುದಿಲ್ಲ. ನಾಳೆ ನಿಮಗೆ ಪ್ರಿಯಾರಿಟಿ ಎಂದು ಹೇಳಿದೆನಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಕೃಷ್ಣಮೂರ್ತಿಯವರು ಎತ್ತಿರುವುದು ಶೂನ್ಯವೇಳೆ ಪ್ರಶ್ನೆ ಅಲ್ಲ. ಅವರು ಈವೊಂದು ವಿಚಾರದಲ್ಲಿ ಒಬ್ಬ ಶಾಸಕರಿಗೆ ನೋಟೀಸ್ ಕೊಟ್ಟು ಆ ವಿಚಾರದ ಬಗ್ಗೆ ಪ್ರಸ್ತಾಪವಾಗಬೇಕೆಂದು ಹೇಳಿದ್ದಾರೆ. ತಾವು ನಮ್ಮ ಮಾತನ್ನು ಕೇಳಿ ಆ ಮೇಲೆ ತಮ್ಮ ತೀರ್ಮ ನೀಡಬೇಕು. ಅವರು ಹೇಳುತ್ತಿರುವುದೇನೆಂದರೆ ಹೊಸದಾಗಿ ಪ್ರಸ್ತಾಪ ಮಾಡುವುದೇನಿಲ್ಲ. ಇವತ್ತೇ ಸಮಯ ಕೊಡಬೇಕೆಂದು ಸಹ ಏನೂ ಇಲ್ಲ. ಕಾನೂನು ಪ್ರಕಾರ ಅವರು ನೋಟೀಸನ್ನು ಕಳುಹಿಸಿದ್ದಾರೆ. ಅದರ ಪ್ರಕಾರ ನೀವು ಒಂದು ಸಮಯವನ್ನು ನಾಳೆ ಅಥವಾ ನಾಡಿದ್ದು ನಿಗದಿ ಮಾಡಿ.

ಅಧ್ಯಕ್ಷರು : ನೋಡೋಣ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) : ಮಾನ್ಯ ಸಿಂಧ್ಯಾರವರು ಹೇಳಿದ್ದು ಸರಿ. ಅವರು ಕೇಳಬೇಕಾದರೆ ಮುಖ ಕೆಂಪು ಮಾಡಿಕೊಂಡು ಕೇಳುತ್ತಾರೆ. ಕೇಳುವುದನ್ನು ನಗುಮುಖದಿಂದ ಕೇಳಬೇಕು.

ಅಧ್ಯಕ್ಷರು : ಸಂಬಂಧಪಟ್ಟ ಶಾಸಕರು ನನ್ನ ಚೇಂಬರ್‌ಗೆ ಬಂದಿದ್ದರು. ಅಂದು ಅವರನ್ನು ಕೇಳಲಿಕ್ಕೆ ಆಗಲಿಲ್ಲ. ಇನ್ನೊಂದು ದಿವಸ ಕೇಳಿ ತಮಗೆ ಉತ್ತರ ಕೊಡಿಸಲು ಅವಕಾಶ ಮಾಡುತ್ತೇನೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಒಂದು ದಿವಸವನ್ನು ನಿಗದಿ ಮಾಡಿ.

ಅಧ್ಯಕ್ಷರು : ಸೋಮವಾರ ಅಥವಾ ಮಂಗಳವಾರ ಅವಕಾಶ ನೀಡುತ್ತೇನೆ ಇವತ್ತು ಸಾಧ್ಯವಿಲ್ಲ. ಸೋಮವಾರ ಅಥವಾ ಮಂಗಳವಾರ ತೆಗೆದುಕೊಳ್ಳೋಣ. ಈಗ ಕೆಲವು ವಿಧೇಯಕಗಳನ್ನು ಮಂಡಿಸುವುದು.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಗಮನ ಸೆಳೆಯುವ ಸೂಚನೆ ಇದೆ.

ಅಧ್ಯಕ್ಷರು : ಮಾನ್ಯ ಸಹಕಾರ ಮಂತ್ರಿಗಳು ನಾಳೆ ಉತ್ತರ ಕೊಡುತ್ತೇನೆ ಎಂದು ಹೇಳಿದ್ದಾರೆ. ನಾಳೆಯ ಅಜೆಂಡಾದಲ್ಲಿ ಅದು ಇರುತ್ತದೆ. ನಾನೇನೂ ಮಾಡುವುದಕ್ಕೆ ಆಗುವುದಿಲ್ಲ. ಮಂತ್ರಿಗಳು ಹಾಗೆ ಹೇಳಿದ್ದಾರೆ.

4. ಸಂವಿಧಾನ ತಿದ್ದುಪಡಿ ಸ್ಥಿರೀಕರಣ ನಿರ್ಣಯ

"ಸಂಸತ್ತಿನ ಎರಡೂ ಸದನಗಳ ಮೂಲಕ ಅಂಗೀಕರಿಸಲಾದಂತೆ ಸಂವಿಧಾನ (ತೊಂಭತ್ತೈದನೇ ತಿದ್ದುಪಡಿ) ವಿಧೇಯಕ 2003ರಲ್ಲಿ ಮಾಡಲು ಉದ್ದೇಶಿಸಿರುವ ಭಾರತ ಸಂವಿಧಾನದ 368ನೇ ಅನುಚ್ಛೇದ 22ನೇ ಖಂಡದ ಪರಂತುಕದ (ಸಿ) ಖಂಡದ ವ್ಯಾಪ್ತಿಯೊಳಗೆ ಬರುವ ತಿದ್ದುಪಡಿಗಳನ್ನು ಈ ಸದನವು ಅಂಗೀಕರಿಸುತ್ತದೆ."

+ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಸಂಸತ್ತಿನ ಎರಡೂ ಸದನಗಳ ಮೂಲಕ ಅಂಗೀಕರಿಸಲಾದಂತೆ ಸಂವಿಧಾನ (ತೊಂಭತ್ತೈದನೇ ತಿದ್ದುಪಡಿ) ವಿಧೇಯಕ, 2003ರಲ್ಲಿ ಮಾಡಲು ಉದ್ದೇಶಿಸಿರುವ, ಭಾರತ ಸಂವಿಧಾನದ 368ನೇ ಅನುಚ್ಛೇದ (2)ನೇ ಖಂಡದ ಪರಂತುಕದ (ಸಿ) ಖಂಡದ ವ್ಯಾಪ್ತಿಯೊಳಗೆ ಬರುವ ತಿದ್ದುಪಡಿಗಳನ್ನು ಈ ಸದನವು ಅಂಗೀಕರಿಸಬೇಕೆಂದು ನಾನು ಕೋರುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು.

ಅಧ್ಯಕ್ಷರು : ಅದರ ಬಗ್ಗೆ ಹೇಳಿ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೆ.....